ಪ್ರಧಾನ ಸಿವಿಲ್ ಜಡ್ಜ್ ಮತ್ತು ಪ್ರ.ದ.ನ್ಯಾ.ದಂ.ಕಾರಿಯವರ ನ್ಯಾಯಾಲಯ, ಶ್ರೀನಿವಾಸಪುರ

**ಸಿ.ಸಿ.ನಂಃ 337 /2021**

ಪಿಡಬ್ಲ್ಯೂಃ 2

ಸಿಡಬ್ಲ್ಯೂಃ 2

| | | |
|---|---|---|
| ಸಾಕ್ಷಿದಾರರ ಹೆಸರು | ಃ | ನಾರಾಯಣಪ್ಪ |
| ತಂದೆಯ ಹೆಸರು | ಃ | ವೆಂಕಟಪ್ಪ |
| ವಯಸ್ಸು | ಃ | 65 ವರ್ಷ |
| ವೃತ್ತಿ | ಃ | ವ್ಯವಸಾಯ |
| ವಾಸಸ್ಥಳ | ಃ | ಮಣಿಗಾನಹಳ್ಳಿ ಗ್ರಾಮ |

ದಿನಾಂಕಃ **03.04.2024** ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.

ಮುಖ್ಯ ವಿಚಾರಣೆಃ ಮಾನ್ಯ ಎಪಿಪಿ ರವರಿಂದಃ-

ಚಾಸಾ 1 ನನ್ನ ಮಗಳು. ಚಾಸಾ 3 ರಿಂದ 6 ರವರು ನನಗೆ ಗೊತ್ತು. ಆರೋಪಿಗಳು ನನಗೆ ಗೊತ್ತು.

2021 ರಲ್ಲಿ ಸಮಯ ಬೆಳಗ್ಗೆ 10.00 ಗಂಟೆ ಸಮಯದಲ್ಲಿ ನಾನು ನನಗೆ ಸೇರಿದ ತಿಪ್ಪೆಯಲ್ಲಿ ಕಸವನ್ನು ಹಾಕುವಾಗ 3 ನೇ ಆರೋಪಿ ಅಲ್ಲಿಗೆ ಬಂದು ಸದರಿ ತಿಪ್ಪೆ ನನ್ನದು ಎಂದು ಮತ್ತು ಕಸ ಹಾಕಬೇಡ ಎಂದು ಹೇಳಿರುತ್ತಾರೆ. ಆಗ ಆರೋಪಿ ನಂ.1 ಮತ್ತು 2 ರವರು ಅಲ್ಲಿಗೆಬಂದು ಚಾಸಾ 1 ರವರು ಬಟ್ಟೆ ಒಣಗಿಹಾಕುವಾಗ ಅಲ್ಲಿಗೆ ಬಂದು ಹಲ್ಲೆ ಮಾಡಿರುತ್ತಾರೆ. 2 ನೇ ಆರೋಪಿ ರಾಡಿನಿಂದ ಚಾಸಾ 1 ರವರ ಎಡಕಿವಿ ಮತ್ತು ತೊಡೆಯ ಬಳಿ ಹಲ್ಲೆ ಮಾಡಿರುತ್ತಾರೆ. ಆಗ ಚಾಸಾ 3 ರಿಂದ 6 ರವರು ಬಂದು ಜಗಳ ಬಿಡಿಸಿರುತ್ತಾರೆ. ಪೊಲೀಸರು ನನ್ನನ್ನು ವಿಚಾರಣೆ ಮಾಡಿ ಹೇಳಿಕೆ ಪಡೆದುಕೊಂಡಿರುವುದಿಲ್ಲ.

*(ಈ ಹಂತದಲ್ಲಿ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಮಾನ್ಯ ಸರಕಾರಿ ಅಭಿಯೋಜಕರು ಪಾಟೀ ಸವಾಲು ಮಾಡಲು ಅನುಮತಿ ಕೋರಿದ್ದು, ಅನುಮತಿ ನೀಡಲಾಯಿತು)*

*ಪಾಟೀ ಸವಾಲು ಮಾನ್ಯ ಸರಕಾರಿ ಅಭಿಯೋಜಕರಿಂದಃ*

*ದಿ.20.12.2020 ರಂದು ಬೆಳಗ್ಗೆ 10.00 ಗಂಟೆಗೆ ನಾನು ಮತ್ತು ಚಾಸಾ 1 ರವರು ಮನೆಯ ಬಳಿ ಇದ್ದಾಗ ಆರೋಪಿಗಳು ಅಲ್ಲಿಗೆ ಬಂದು ಆ ಪೈಕಿ 3 ನೇ ಆರೋಪಿಯು ನನ್ನನ್ನು ಕುರಿತು ತಿಪ್ಪೆ ಹಾಕಿರುವ ಜಾಗ ನಮ್ಮದು ನೀವು ಖಾಲಿ ಮಾಡಬೇಕು ಬೋಳಿ ನನ್ನ ಮಗನೇ ಎಂದು ಆರೋಪಿ ನಂ.3 ರವರು ಬೈದಿರುತ್ತಾರೆಂದರೆ ಸರಿ. ಆಗ ಚಾಸಾ 1 ರವರು ಅಲ್ಲಿಗೆ ಬಂದು ಗಲಾಟೆ ಮಾಡಬೇಡಿ ಎಂದು ಹೇಳಿದ ಕಾರಣ ಆರೋಪಿ ನಂ .2 ಮತ್ತು 3 ರವರು ಚಾಸಾ 1 ರವರನ್ನು ಕುರಿತು ಬೇರ್ವಸಿ ಮುಂಡೆ ನಿನ್ನದು ಜಾಸ್ತಿ ಆಯಿತು ಎಂದು ಬೈದಿರುತ್ತಾರೆಂದರೆ ಸರಿ. 2 ನೇ ಆರೋಪಿ ಕೈಯಿಂದ ಚಾಸಾ 1 ರವರ ಕತ್ತಿಗೆ ಹಲ್ಲೆ ಮಾಡಿರುತ್ತಾರೆಂದರೆ ಸರಿ. 1 ನೇ ಆರೋಪಿಯು ಕಬ್ಬಿಣದ ರಾಡಿನಿಂದ ಚಾಸಾ 1 ರವರ ಬೆನ್ನು, ಎಡತೊಡೆ, ಬಲಭಾಗದ ತೊಡೆ ಮತ್ತು ಎಡಕೈ ಹೆಬ್ಬೆರಳಿಗೆ ಹೊಡೆದು ರಕ್ತಗಾಯ ಉಂಟು ಮಾಡಿರುತ್ತಾರೆಂದರೆ ಸರಿ . ಆರೋಪಿಗಳು ನಿಮಗೆ ಕೊಲೆ ಬೆದರಿಕೆ ಹಾಕಿರುತ್ತಾರೆಂದರೆ ಸರಿ. ಪೊಲೀಸರು ನನ್ನನ್ನು ವಿಚಾರಣೆ ಮಾಡಿ ಹೇಳಿಕೆ ಪಡೆದುಕೊಂಡಿರುತ್ತಾರೆಂದರೆ ಸರಿ. ಸಾಕ್ಷಿಯು ಮು .ಮಾ.1 ನ್ನು ನೋಡಿ ಗುರುತಿಸುತ್ತಾರೆ . ಸಾಕ್ಷಿಯು ಆರೋಪಿಗಳನ್ನು ನೋಡಿ ಗುರುತಿಸುತ್ತಾರೆ.*

*ಪಾಟೀ ಸವಾಲು ಆರೋಪಿಗಳ ಪರ ಶ್ರೀ ಕೆ.ವಿ.ಕೆ. ವಕೀಲರಿಂದ ಃ*

*ಆರೋಪಿಗಳ ಪೈಕಿ 3 ನೇ ಆರೋಪಿ ನನ್ನ ಮಗ ಮತ್ತು ಆರೋಪಿ ನಂ.1 ಮತ್ತು 2 ರವರು ಮೊಮ್ಮಕ್ಕಳು. ತಿಪ್ಪೆ ಇರುವ ಜಾಗಕ್ಕೂ ನಮ್ಮ ಮನೆಗೂ 10 ಅಡಿ ಅಂತರವಿದೆ. ತಿಪ್ಪೆ ಇರುವ ಜಾಗ*

ನನ್ನದು ಎಂದು ತೋರಿಸಲು ನಾನು ಪೊಲೀಸರಿಗೆ ದಾಖಲಾತಿ ನೀಡಿದ್ದೇನೆ. ನನ್ನ ಮನೆಯ ಸುತ್ತಮುತ್ತ ಮನೆಗಳು ಇವೆ. ಗಲಾಟೆಯಾದಾಗ ಎಷ್ಟು ಜನ ಸೇರಿದ್ದರು ಎಂದು ನನಗೆ ನೆನಪಿಲ್ಲ . ಆಗ ಚಾಸಾ 1 ರವರು ಮನೆಯಲ್ಲಿ ಇದ್ದರು. ಆರೋಪಿಗಳು ನನ್ನ ಮನೆಯ ಬಳಿ ಬಂದಿಲ್ಲ , ಅವಾಚ್ಯ ಶಬ್ದಗಳಿಂದ ಬೈದಿಲ್ಲ, ಹಲ್ಲೆ ಮಾಡಿಲ್ಲ ಮತ್ತು ಕೊಲೆ ಬೆದರಿಕೆ ಹಾಕಿಲ್ಲ ಎಂದರೆ ಸರಿಯಲ್ಲ . ಆರೋಪಿ ನಂ.1 ಮತ್ತು 2 ರವರು ರಾಡಿನಿಂದ ಮತ್ತು ಕೈಯಿಂದ ಹಲ್ಲೆ ಮಾಡಿಲ್ಲ ಎಂದರೆ ಸರಿಯಲ್ಲ. ಮು.ಮಾ.1 ರಿಂದ ಆ ದಿನ ಹಲ್ಲೆ ಮಾಡಿಲ್ಲ ಎಂದರೆ ಸರಿ. ಚಾಸಾ 3 ರಿಂದ 6 ರವರು ನಮ್ಮ ಸಂಬಂಧಿಕರು . ಆರೋಪಿ ಮತ್ತು ನಾನು ಬೇರೆ ಬೇರೆ ಪಕ್ಷದವರು ಎಂದರೆ ಸರಿಯಲ್ಲ . ಆರೋಪಿಗಳಿಗೆ ತೊಂದರೆ ನೀಡಲು ಸುಳ್ಳು ಕೇಸು ನೀಡಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆಂದರೆ ಸರಿಯಲ್ಲ.

**ಮರು ವಿಚಾರಣೆಃ** ಇಲ್ಲ

ಮುಕ್ತ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.

ಓ. ಹೇ. ಕೇ. ಸರಿ ಇದೆ.

**(ಮನು ಬಿ.ಕೆ.)**

ಪ್ರಧಾನ ಜೆಎಂಎಫ್‌ಸಿ, ಶ್ರೀನಿವಾಸಪುರ